**ಸಾಕ್ಷಿಗೆ ದಿನಾಂಕಃ31-08-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಪಾಟೀ ಸವಾಲು ಃ ವಾದಿಗಳ ಪರ ಶ್ರೀ. ವಿ ವಿ ವಕೀಲರಿಂದ ಃ**

1. ಹಿಂದೆ ನನ್ನ ತಂದೆ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತನ್ನು ಹಿಂದೆ ಅನ್ಯಕ್ರಾಂತ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತು ಮತ್ತು ಅವರಿಗೆ ಇದ್ದಂತಹ ಅಕ್ಕ-ಪಕ್ಕ ನಿವೇಶನಗಳನ್ನು ಬೇರೆಯವರಿಗೆ ಹಿಂದೆಯೇ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಅಂದರೆ ದಿಃ02-07-1988 ರಂದು ನನ್ನ ತಂದೆ ದಾವಾ ಸ್ವತ್ತನ್ನು 1 ನೇ ವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಆ ದಿನದಿಂದ 1 ನೇ ವಾದಿಯೇ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ ಅದನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ.

2. ದಾವಾ ಸ್ವತ್ತನ್ನು ನಾನು ಇತ್ತೀಚೆಗೆ ನೋಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರವನ್ನಾಗಲೀ ಅಥವಾ ಅದರಲ್ಲಿ ನಮೂದಿಸಿರುವ ವಿಸ್ತೀರ್ಣ ಅಥವಾ ಅಳತೆಯನ್ನಾಗಲೀ ನಾನು ಪರಿಶೀಲಿಸಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಅಳತೆಯನ್ನು ನನ್ನ ತಂದೆಯವರು ಆ ದಿನಕ್ಕೆ ಅವರಿಗೆ ತಿಳಿದ ಮಟ್ಟಿಗೆ ಬರೆಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಬಗ್ಗೆ ಆದ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂದಿ ಇಲ್ಲಿಯವರೆಗೂ ಅದೇ ರೀತಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂದಿ ಹಾಗೂ ಈ ದಾವೆಯ ಅನುಸೂಚಿಯಲ್ಲಿ ದಾವಾ ಸ್ವತ್ತಿಗೆ ತೋರಿಸಿರುವ ಚೆಕ್ಕು ಬಂದಿ ಒಂದೇ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು 1 ನೇ ವಾದಿಯು ಖರೀದಿಸಿದ ನಂತರ 2010 ರಲ್ಲಿ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ವಾದಿ ಹಾಗೂ ಸುರಾಲ್ ಚಂದ್ರ ಶೇಖರ್ ರವರ ಮಗ ರಾಜೇಂದ್ರ ಎನ್ನುವವರ ನಡುವೆ ವಿವಾದ ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಸಹ ಹೂಡಿರಲಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

3. ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣವು ಪೂರ್ವ-ಪಶ್ಚಿಮವಾಗಿ ಉತ್ತರದ ಕಡೆಗೆ 184 ಅಡಿ, ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ದಕ್ಷಿಣದಕಡೆಗೆ 197 ಅಡಿ, ಉತ್ತರ-ದಕ್ಷಿಣವಾಗಿ ಪೂರ್ವದ ಕಡೆಗೆ 74 ಅಡಿ ಮತ್ತು ಪಶ್ಚಿಮದ ಕಡೆಗೆ 69 ಅಡಿ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಹೀಗೆ ಒಟ್ಟು 13,962.25 ಚದರ ಅಡಿ -

ವಿಸ್ತೀರ್ಣದ ನಿವೇಶನ ಆಗಿರುತ್ತದೆ ಎಂದು ಸದರಿ ಕ್ರಯ ಪತ್ರದಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ಕ್ರಯ ಪತ್ರವು 1 ನೇ ವಾದಿ ಹಾಗೂ ನನ್ನ ತಂದೆಯ ನಡುವೆ ಮೇಲೆ ಹೇಳಿದ ವಿಸ್ತೀರ್ಣದ ನಿವೇಶನಕ್ಕೆ ಸಂಬಂಧ ಪಟ್ಟಂತೆ ಆಗಿರುವ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ.

4. ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ನನ್ನ ತಂದೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ಪೂರ್ವ -ಪಶ್ಚಿಮದ ಅಳತೆಯಲ್ಲಿ ವ್ಯತ್ಯಾಸ ಬಂದಿರುತ್ತದೆ ಮತ್ತು ಸಂತೋಷ್ ಕುಮಾರ್ ಯಾನೆ ರಾಜೇಂದ್ರ ರವರ ಸ ನಂ. 227 ರ ಸ್ವತ್ತಿನಲ್ಲಿಯೂ ಸ್ವಲ್ಪ ಸದರಿ ಆಸ್ತಿಯು ಸೇರುತ್ತಿತ್ತು ಎಂದು ವಾದಿಗಳಿಗೆ ಇಂದಿನ ಒ ಎಸ್ ಸಂಖ್ಯೆ 6/2010 ರಲ್ಲಿ 2019 ರಲ್ಲಿ ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಒ ಎಸ್ ಸಂಖ್ಯೆ 6/2023 ರಲ್ಲಿ ನಿಯೋಗಿಯವರು ಸಲ್ಲಿಸಿದ ವರದಿಯಲ್ಲಿ ನನ್ನ ತಂದೆ 1 ನೇ ವಾದಿಗೆ ಮಾಡಿಕೊಟ್ಟ ಕ್ರಯ ಪತ್ರದಲ್ಲಿ ತಪ್ಪು ಅಳತೆ ನಮೂದಾಗಿರುವುದು ಕಂಡು ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಸಲ್ಲಿಸಿದ ನಿಯೋಗಿಯವರವರ ವರದಿಯ ಪ್ರಕಾರ ಹಾಗೂ ವಾಸ್ತವದಲ್ಲಿ ಪೂರ್ವ-ಪಶ್ಚಿಮವಾಗಿ ಉತ್ತರದ ಕಡೆಗೆ-97.2 ಅಡಿ, ಪೂರ್ವ-ಪಶ್ಚಿಮವಾಗಿ ದಕ್ಷಿಣದ ಕಡೆಗೆ 121.10 ಅಡಿ, ಉತ್ತರ-ದಕ್ಷಿಣವಾಗಿ ಪೂರ್ವದ ಕಡೆಗೆ -121.8 ಮತ್ತು ಪಶ್ಚಿಮದ ಕಡೆಗೆ 125.4 ಅಡಿ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹೀಗೆ ವಾಸ್ತವದಲ್ಲಿ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 13,679 ಚದರ ಅಡಿ ಯಷ್ಟು ಮಾತ್ರ ಜಾಗ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

5. ನನ್ನ ತಂದೆ 1 ನೇ ವಾದಿಗೆ ಬರೆದು ಕೊಟ್ಟ ಕ್ರಯ ಪತ್ರದಲ್ಲಿ ಸದರಿ ಆಸ್ತಿಯ ಪೂರ್ವಕ್ಕೆ ಇದ್ದ ರಸ್ತೆ ಮತ್ತು ಉತ್ತರಕ್ಕೆ ಇದ್ದ ರಸ್ತೆ ಈಗಲೂ ಸಹ ಅಸ್ತಿತ್ವದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಸಂತೋಷ್ ಕುಮಾರ್ ಯಾನೆ ರಾಜೇಂದ್ರ ರವರ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಸ ನಂ. 227 ರಲ್ಲಿರುವ ಸಂತೋಷ್ ಕುಮಾರ್ ಯಾನೆ ರಾಜೇಂದ್ರ ರವರ ಕುಟುಂಬಕ್ಕೆ ಸೇರಿದ ಉಳಿದ ಆಸ್ತಿಗಳು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು 1 ನೇ ವಾದಿಗೆ ಮಾರಾಟ ಮಾಡುವ ಸಮಯದಲ್ಲಿ ಸದರಿ ಸ ನಂ. 226 ರಲ್ಲಾಗಲೀ ಅಥವಾ ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಾಗಲೀ ಯಾವುದೇ ಇತರೆ ಯಾವುದೇ ಆಸ್ತಿಯನ್ನು ಉಳಿಸಿಕೊಂಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರದಲ್ಲಿ ತೋರಿಸಿರುವಂತೆ ಚೆಕ್ಕು ಬಂದಿ ಪೂರ್ವಕ್ಕೆ ಮತ್ತು

ದಕ್ಷಿಣಕ್ಕೆ ಸ ನಂ. 227 ರ ಸ್ವತ್ತು ಈಗಲೂ ಸಹ ಅಸ್ತಿತ್ವದಲ್ಲಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ 1 ನೇ ವಾದಿಯು 2 ನೇ ವಾದಿಯ ಹೆಸರಿನಲ್ಲಿ ಒಂದು ದಾನ ಪತ್ರವನ್ನು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ.

6. ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ನನಗೆ ಮತ್ತು ನನ್ನ ತಾಯಿಗೆ ವಾದಿಗಳ ವಿರುದ್ಧ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. 2 ನೇ ವಾದಿ ಮೊದಲಿನಿಂದಲೂ ನನಗೂ ಹಾಗೂ ನನ್ನ ಕುಟುಂಬಸ್ಥರಿಗೆ ಪರಿಚಯಸ್ಥ ವ್ಯಕ್ತಿಯಾಗಿರುತ್ತಾರೆ ಎಂದರೆ ಸರಿ. ನಮ್ಮ ಹಾಗೂ 2 ನೇ ವಾದಿ ನಡುವೆ ಒಳ್ಳೆಯ ಸಂಬಂಧ ಇರುತ್ತದೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನನ್ನ ಹಾಗೂ ನನ್ನ ತಾಯಿಯಲ್ಲಿ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ವಿಸ್ತೀರ್ಣವು ನನ್ನ ತಂದೆ ಬರೆದುಕೊಟ್ಟಿರುವ ಕ್ರಯ ಪತ್ರದಂತೆ ವ್ಯತ್ಯಾಸವಾಗಿತ್ತು ಅದಕ್ಕೆ ಸಂಬಂಧ ಪಟ್ಟಂತೆ ಒಂದು ತಿದ್ದು ಪಡಿ ಪತ್ರವನ್ನು ಮಾಡಿಕೊಡಲು ಕೇಳಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ತಾಯಿ ತಿದ್ದು ಪಡಿ ಪತ್ರವನ್ನು ಅವರಿಗೆ ಬರೆದು ಕೊಡಲು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ತಿದ್ದು ಪಡಿ ಪತ್ರವನ್ನು ಬರೆದುಕೊಡಲು ಮುಂದೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಬರೆದುಕೊಟ್ಟಲ್ಲಿ ಉಳಿದ ಅಕ್ಕ ಪಕ್ಕದ ಆಸ್ತಿದಾರರಿಗೆ ತೊಂದರೆ ಆಗುತ್ತದೆ ಮತ್ತು ಅದನ್ನು ನನ್ನ ತಂದೆಯವರು ಮಾರಾಟ ಮಾಡಿರುವುದರಿಂದ ನಾವು ತಿದ್ದು ಪಡಿ ಪತ್ರವನ್ನು ಬರೆದುಕೊಡುವ ಹಕ್ಕು ಇರುವುದಿಲ್ಲ ಎಂದು ನುಡಿದಿರುತ್ತಾರೆ.

7. ಇದಾದ ನಂತರ ದಿಃ15-06-2022 ರಂದು 2 ನೇ ಪ್ರತಿವಾದಿಯು ಅವರ ವಕೀಲರ ಮುಖಾಂತರ ಒಂದು ತಿದ್ದು ಪಡಿ ಪತ್ರ ಬರೆದುಕೊಡಲು ನನಗೆ ಮತ್ತು ಅವರ ತಾಯಿಗೆ ತಿಳುವಳಿಕೆ ನೋಟೀಸು ಸಹ ನೀಡಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲೂ ಸಹ ನನಗೆ ಮತ್ತು ನನ್ನ ತಾಯಿಗೆ ಯಾವುದೇ ತಿದ್ದು ಪಡಿ ಪತ್ರವನ್ನು ಬರೆದುಕೊಡಲು ಹಕ್ಕು ಇರುವುದಿಲ್ಲ ಮಾತ್ರ ಹೇಳಿರುತ್ತೇನೆ ಎಂದರೆ ಸರಿ. ನಾನು ಈಗ ಹೇಳುತ್ತಿರುವಂತೆ ತಿದ್ದು ಪಡಿ ಪತ್ರವನ್ನು ಬರೆದುಕೊಟ್ಟಲ್ಲಿ ಅಕ್ಕ ಪಕ್ಕ ಇರುವ ಆಸ್ತಿದಾರರಿಗೆ ತೊಂದರೆ ಆಗುತ್ತದೆ ಎಂದು ತಿದ್ದು ಪಡಿ ಪತ್ರವನ್ನು ಬರೆದುಕೊಡುತ್ತಿಲ್ಲ ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಮಾತ್ರ ನನ್ನ ತಂದೆಯ ವಾರಸ್ಸುದಾರರು ಆಗಿರುತ್ತೇವೆ ಎಂದರೆ ಸರಿ. ಆದ್ದರಿಂದ ನಾನು ಮತ್ತು ನನ್ನ ತಾಯಿ ನನ್ನ ತಂದೆ ಹಿಂದೆ ಮಾರಾಟ ಮಾಡಿದ್ದ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ವ್ಯವಹರಿಸಲು ಮತ್ತು ನನ್ನ ತಂದೆ ಬರೆದುಕೊಟ್ಟಿರುವ ದಾಖಲಾತಿಗಳನ್ನು ತಿದ್ದು ಪಡಿ ಮಾಡಿಕೊಡಲು ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ

ಆಸ್ತಿಯಾಗಿರುವ ಕಾರಣ ನನಗಾಗಲೀ, ನನ್ನ ತಾಯಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನಗೆ ಹಾಗೂ ನನ್ನ ತಾಯಿಗೆ ನನ್ನ ತಂದೆ ಮಾರಾಟ ಮಾಡಿರುವ ಆಸ್ತಿಗೆ ಸಂಬಂಧ ಪಟ್ಟಂತೆ ತಿದ್ದು ಪಡಿ ಪತ್ರವನ್ನು ಮಾಡಿಕೊಡುವ ಸಂಪೂರ್ಣ ಹಕ್ಕು ಇದ್ದರೂ ಸಹ ನಮ್ಮ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಈಗ ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ವಾದಿಗಳು ಸಲ್ಲಿಸಿರುವ ದಾವೆಯು ವಾದಿಗಳ ಪರವಾಗಿ ಡಿಕ್ರಿಯಾದಲ್ಲಿ ನನಗೆ ಮತ್ತು ನನ್ನ ತಾಯಿಗೆ ಯಾವುದೇ ವೈಯುಕ್ತಿಕ ತೊಂದರೆ ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ನನಗೂ ಮತ್ತು ನನ್ನ ತಾಯಿಗೂ ಆ ರೀತಿ ತಿದ್ದು ಪಡಿ ಪತ್ರವನ್ನು ಬರೆದುಕೊಡಲು ಹಕ್ಕು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**:: ಮರು ವಿಚಾರಣೆ ಇಲ್ಲ ::**

**(ದಿನಾಂಕ:31-08-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂ: ಶೃಂಗೇರಿ**